ಹೋಟೆಲ್‌ಗಳನ್ನು ಉದ್ದಿಮೆಗಳನ್ನಾಗಿ ಪರಿಗಣಿಸುವುದು

2026 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ) : ಮಾನ್ಯ ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸಿ ಅಭಿವೃದ್ಧಿ ನಿಗಮದಿಂದ ಖಾಸಗೀ ಹೋಟೆಲ್ಗಳನ್ನು ಉದ್ದಿಮೆಗಳನ್ನಾಗಿ ಪರಿಗಣಿಸಲಾಗಿದೆಯೇ?

ಆ) ಸದರಿ ಹೋಟೆಲ್ ಉದ್ದಿಮೆಗಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳು ಯಾವುವು?

ಇ) ಸದರಿ ಉದ್ದಿಮೆದಾರರಿಗೆ ಬಾರ್ ಲೈಸೆನ್ಸ್ ಕೊಡಲು ತೀರ್ಮಾನಿಸಿದೆಯೇ?

ಈ) ಹಾಗಿದ್ದಲ್ಲಿ ಸದರಿ ಉದ್ದಿಮೆಗಳು ಬಸ್ ಸ್ಟಾಂಡ್ ಹತ್ತಿರ ಶಾಲಾ ಕಾಲೇಜು ಹತ್ತಿರ ಹಾಗೂ ಸಾರ್ವಜನಿಕ ಜನರ ಮನೆಯ ಹತ್ತಿರದಲ್ಲಿಯೇ ಇದ್ದರೆ ಸದರಿ ಬಾರ್ ಗಳಿಂದ ಜನರಿಗೆ ತೊಂದರೆಯಾಗಿರುವುದಿಲ್ಲವೇ?

ಉ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಮತ್ತು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಇಲ್ಲ, ಆದರೆ ಪ್ರವಾಸೋದ್ಯಮ ಇಲಾಖೆಯಿಂದ ಹೋಟೆಲುಗಳನ್ನು ಉದ್ಯಮವೆಂದು ಪರಿಗಣಿಸಿದೆ.

ಆ) ಬಂಡವಾಳ ಹೂಡಿಕೆ ಮೇಲೆ ಶೇಕಡ 15 ರಿಂದ 25ರಷ್ಟು ಗರಿಷ್ಠ ರೂ. 25.00 ಲಕ್ಷ ಸಬ್ಸಿಡಿ 3 ರಿಂದ 7 ವರ್ಷಗಳವರೆಗೆ ಮಾರಾಟ ತೆರಿಗೆ, ವೈಭೋಗ ತೆರಿಗೆ ಪಾವತಿಯಲ್ಲಿ ವಿನಾಯ್ತಿ, ವಿದ್ಯುತ್ ಶುಲ್ಕ ಪಾವತಿಯಲ್ಲಿ ರಿಯಾಯಿತಿ, ಸ್ಟಾಂಪ್ ಡ್ಯೂಟಿ ಪಾವತಿಯಲ್ಲಿ ವಿನಾಯ್ತಿ ನೋಂದಣಿ ಶುಲ್ಕ ಪಾವತಿಯಲ್ಲಿ ರಿಯಾಯ್ತಿ ಮಹಿಳೆ ಅಲ್ಪ ಸಂಖ್ಯಾತರು, ಪರಿಶಿಷ್ಟ ಜಾತಿ, ಪಂಗಡ, ಅಂಗವಿಕಲ, ಮಾಜಿ ಯೋಧರಿಗೆ ಶೇಕಡ 5ರಷ್ಟು ಗರಿಷ್ಠ ರೂ. 1.00 ಲಕ್ಷ ಹೆಚ್ಚುವರಿ ಸಬ್ಸಿಡಿ, ಅಸಂಪ್ರದಾಯಿಕ ಇಂಧನ ಬಳಕೆಗೆ ಶೇಕಡ 5ರಷ್ಟು ಹೆಚ್ಚುವರಿ ಸಬ್ಸಿಡಿ ನೀಡಲಾಗುವುದು.

ಇ) ಬಾರ್ ಲೈಸನ್ಸ್ ಪಡೆಯಲು ಅರ್ಹತೆ ಹೊಂದಿರುವ ಹೋಟೆಲ್‌ಗಳನ್ನು ಗಣನೆಗೆ ತೆಗೆದುಕೊಂಡು, ಅಬಕಾರಿ ಇಲಾಖೆಯು ಲೈಸೆನ್ಸ್ ನೀಡುವುದು.

ಈ) ಈ ವಿಷಯವು ಅಬಕಾರಿ ಇಲಾಖೆಯ ವ್ಯಾಪ್ತಿಗೊಳಪಡುತ್ತದೆ.

ಉ) ಮೇಲಿನ (4) ರಂತೆ

ಅಂಕಲಿ ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಸೇತುವೆ ನಿರ್ಮಾಣ

2490 - ಶ್ರೀ ಪ್ರಕಾಶ ಬಾ. ಹುಕ್ಕೇರಿ (ಸದಲಗಾ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕಲಿ ಹಾಗೂ ಮಂಜರಿ ಗ್ರಾಮಗಳ ಮಧ್ಯದಲ್ಲಿ ಕೃಷ್ಣಾ ನದಿಗೆ ಸೇತುವೆ ನಿರ್ಮಿಸುವ ಕಾಮಗಾರಿಯು ಈಗ ಯಾವ ಹಂತದಲ್ಲಿದೆ?

ಆ) ಇದುವರೆಗೆ ಈ ಕಾಮಗಾರಿಗಾಗಿ ವಿರ್ಚು ಮಾಡಿರುವ ಹಣವೆಷ್ಟು?

ಇ) ಈ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸೇತುವೆಯ 15 ಅಂಕಣಗಳಲ್ಲಿ 2 ಅಂಕಣಗಳು ಮುಗಿದಿದೆ. ಇದಲ್ಲದೆ ಎಂಟು ಕಂಬಗಳು ಹಾಗೂ ಒಂದು ಅಬಟ್‌ಮೆಂಟ್ ಮುಗಿದಿದೆ. ಮಳೆಗಾಲವಾದ್ದರಿಂದ ಕಾಮಗಾರಿ ಈಗ ಪ್ರಗತಿಯಲ್ಲಿಲ್ಲ.

ಆ) ಇದುವರೆವಿಗೂ ಈ ಕಾಮಗಾರಿಗಾಗಿ ಆದ ಒಟ್ಟು ವೆಚ್ಚ 228.67 ಲಕ್ಷ ರೂ.ಗಳು

ಇ) ಗುತ್ತಿಗೆ ಕರಾರಿನ ಪ್ರಕಾರ ಈ ಕಾಮಗಾರಿಯನ್ನು 30.11.97ರೊಳಗೆ ಪೂರೈಸಬೇಕಿದೆ.

ಖಾಲಿ ಇರುವ ಪಶು ವೈದ್ಯಾಧಿಕಾರಿಗಳ ಹುದ್ದೆಗಳು

119 - ಶ್ರೀ ಪ್ರಕಾಶ್ ಬಾ ಹುಕ್ಕೇರಿ (ಸದಗಲಾ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸದಲಗಾ ಕ್ಷೇತ್ರದಲ್ಲಿ ಗಳತಗಾ, ಭೋಜ, ಇಂಗಳಿ ಹಾಗೂ ಎಕ್ಸಂಬಾ ಗ್ರಾಮಗಳಲ್ಲಿಯ ಪಶು ಪರೀಕ್ಷಕರು ಮತ್ತು ಪಶುವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇದ್ದು ಜಾನುವಾರುಗಳಿಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಇಲ್ಲದ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಸದಲಗಾ ಕ್ಷೇತ್ರದ ಎಲ್ಲ ಪಶುಚಿಕಿತ್ಸಾಲಯ ಆಸ್ಪತ್ರೆಗಳಲ್ಲಿ ಅಟೆಂಡರ್ ಹುದ್ದೆಗಳು ಸುಮಾರು ವರ್ಷಗಳಿಂದ ಖಾಲಿ ಇರುವುದರಿಂದ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಣೆಯಾಗದೇ ತೊಂದರೆಯಾಗುತ್ತಿರುವುದು ನಿಜವೇ;

ಇ) ಹಾಗಿದ್ದಲ್ಲಿ ಸದರಿ ವಿಷಯಗಳಲ್ಲಿ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಬಂದಿದೆ

ಆ) ಹೌದು

ಇ) ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ಮತ್ತು ಪಶುಪರೀಕ್ಷಕರ ಹುದ್ದೆಗಳನ್ನು ಮುಂಬಡ್ತಿಯಿಂದ ಗ್ರೂಪ್-ಡಿ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ - ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹಣಕಾಸು ಸಂಸ್ಥೆಯಿಂದ ಸಾಲ ಸೌಲಭ್ಯ

2598 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು (ಕೆಎಸ್ ಎಫ್ ಸಿ) 1990 ರಿಂದ ಜೂನ್ 1996ರ ವರೆವಿಗೆ ಎಷ್ಟು ಹಣವನ್ನು ರಾಜ್ಯದ ವಿವಿಧ ಉದ್ಯಮಗಳಿಗಾಗಿ ಸಾಲ ನೀಡಿದೆ?

ಆ) ಆ ಸಾಲಕ್ಕೆ ವಿಧಿಸುವ ಬಡ್ಡಿಯ ದರ ಎಷ್ಟು?

ಇ) ಯುವ ಉದ್ಯಮಿಗಳು ಸಾಲ ಪಡೆಯುವಾಗ ಈ ಸಂಸ್ಥೆಯವರು ಕಿರುಕುಳ ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :